


## ರಮೇಶ ಅರೋಲಿ

ಕಲೆ: ರೂಪಶ್ರೀ ಕಲ್ಲಿಗನೂರು

# ಮತ್ತೆ ಪ್ರೇಮಿಸುವಂತಾದರೆ ಸಖಿ!



ಸಖಿ
ಮತ್ತೊಮ್ಮೆ ಪ್ರೇಮಿಸುಂತಾದರೆ ನಾವು
ಹೀಗೆ ಮಾಡಬಹುದಿತ್ತು

ನನ್ನ ಕಿವಿ ನಿನ್ನ ಹೆಸರು ಕೇಳಿಸಿಕೊಂಡೂ
ಒಂದು ದಿನ ನಿನ್ನೆದುರು ನಿಂತು
ಹೆಸರೇನೆಂದು ಕೇಳಬಹುದಿತ್ತು;
ಇಲ್ಲ ಹೇಳಬಹುದಿತ್ತು
ನನ್ನ ಹೆಸರೇನು ಕೇಳೆಂದು!
ಅದುರುವ ನಿನ್ನ ಕೈಯ ಆ ನಡುಕ
ನನ್ನನ್ನೂ ಕಂಪಿಸಿ, ನಾಲಗೆ ಒಣಗಿಸಿ
ತಲುಪಿಸಬಹುದಿತ್ತು ನನ್ನ ಹೆಸರನ್ನು
ನಿನ್ನ ನೇತಾಡುವ ಆ ಝುಮಕಿಗೆ!

ಮತ್ತೆ ಪ್ರೇಮಿಸುವಂತಾದರೆ ಸಖಿ,
ಕಾಲ ನಮ್ಮ ಕಾಲ್ನಡಿಗೆಯನು
ತುಸು ಅಳೆದು ಸಮವಾಗಿ ತುಳಿಸಬಹುದಿತ್ತು
ಇಲ್ಲ ನಿನ್ನನ್ನು ನನ್ನೆದುರು ನಡೆಯಿಸಿ
ನನ್ನನ್ನು ಹಿಂಬಾಲಿಸಲು ಆದೇಶಿಸಬಹುದಿತ್ತು
ಈಗ ನಿನ್ನ ಕಣ್ಣು ನನ್ನನ್ನು ಹಿಂಬಾಲಿಸುವಂತೆ!

ಹೀಗೆ ಮತ್ತೆ ನಾವು ಪ್ರೇಮಿಸುವಂತಾದರೆ ಸಖಿ
ಬಚ್ಚಿಟ್ಟುಕೊಳ್ಳಬಹುದಿತ್ತು
ಬಳಿ ಸುಳಿಯಲು ಗಡಿ ಮೀರುವ ಎದೆ ಬಡಿತವನು
ಇಲ್ಲ ಉಳಿಸಿಕೊಳ್ಳಬಹುದಿತ್ತು
ಮತ್ತೆಂದಾದರು ನಗದು ಮಾಡಿಕೊಳ್ಳಬಹುದಿದ್ದ
ತುಟಿ ಅಂಚಿನ ನಾಲ್ಕು ಮುತ್ತಾದರು!

ಪತಂಗಗಳೆರಡು ಪಹರೆ ಕಾಯುವ ಸಂಜೆ
ಮತ್ತೆ ನಾವು ಪ್ರೇಮಿಸುವಂತಾದರೆ ಸಖಿ
ನಿನ್ನ ಕಣ್ಣ ಕಾಡಿಗೆಯನು ಮುಗಿಲಿಗೆ ಬಳಿದು
ನೆಲಕ್ಕೆ ಉದುರುವ ಅನಾಥ ಚುಕ್ಕಿಗೆ
ಪ್ರೇಮಿಗಳೆಂದು ಹೆಸರು ಇಡಬಹುದಿತ್ತು
ಹೀಗೆ ನಾವು ಮತ್ತೆ ಪ್ರೇಮಿಸಬಹುದಿತ್ತು ಸಖಿ!